ಜೆಎಸ್‌ಎಸ್ ಮಹಿಳಾ ಕಾಲೇಜು ಕೊಳ್ಳೇಗಾಲ-571440

ದಿನಾಂಕ : 24-02-2018

ಪ್ರಕಟಣೆಯ ಕೃಪೆಗಾಗಿ

## ಭೂಮಿಯನ್ನು ನಾವು ಕಾಪಾಡಿದರೆ, ಅದು ನಮ್ಮನ್ನು ಕಾಪಾಡುತ್ತದೆ – ಶ್ರೀ ಕೆ.ಸಿ. ಮಧು ಬಲ್ಲಪ್ಪಸ್ವಾಮಿ

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ

**ಕೊಳ್ಳೇಗಾಲ 24-02-2018 :** ಭೂಮಿಯ ಮೂಲಂಶಗಳಾದ ಗಾಳಿ, ನೀರು, ಬೆಳಕು, ಉಷ್ಣಾಂಶ, ಮಣ್ಣು, ಗಿಡ, ಮರ ಮುಂತಾದವುಗಳಲ್ಲದೆ ಮನುಜ, ಪ್ರಾಣಿ, ಪಕ್ಷಿ ಸಂಕುಲವಲ್ಲದೆ ಯಾವುದೇ ಜೀವರಾಶಿಗೆ ಉಳಿಗಾಲವಿಲ್ಲ. ಆದರೆ ಇಂದು ಭೂಮಿಯು ವಿನಾಶದಂಚಿಗೆ ಬಂದು ನಿಂತಿದೆ, ನಾವು ಭೂಮಿಯನ್ನು ಕಾಪಾಡಿಕೊಂಡರೆ ಅದು ನಮ್ಮನ್ನು ಕಾಪಾಡುತ್ತದೆ ಎಂದು ಶ್ರೀ ಮಧು ಬಲ್ಲಪ್ಪಸ್ವಾಮಿ ಕೆ.ಸಿ. ಜಿ.ಐ.ಎಸ್ ಮತ್ತು ಆಡಾರ್ ವಿಶ್ಲೇಷಕರು, ಜಿಯೋ ಪ್ಲಾನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರುರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ವಿಭಾಗದಿಂದ ಆಯೋಜಿಸಿದ್ದ "ಭೌಗೋಳಿಕ ಮಾಹಿತಿ ಪದ್ಧತಿಯ ವೈವಿಧ್ಯತೆಗಳು" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡುತ್ತ ಮಾತನಾಡಿದರು.

ನಕ್ಷೆಗಳ ಮಾಹಿತಿಯು ನಮಗೆ ಕ್ರಿ.ಪೂ 2300ರಲ್ಲಿ ಪ್ರಾಚೀನ ನಾಗರೀಕತೆಯಾದ ಮೆಸಪಟೋಮಿಯಾ ನಗರದ ನಕ್ಷೆಯೊಂದಿಗೆ ದೊರೆತಿರುತ್ತದೆ. ನಕ್ಷೆ ತಯಾರಿಕೆಯ ವಿಧಾನವು ಇಂದು ಸಾಕಷ್ಟು ಬದಲಾವಣೆಗಳನ್ನು ಪಡೆದಿದೆ ಎಂದು ತಿಳಿಸುತ್ತ ಭೂಮಿಯ ಎಲ್ಲಾ ಅಂಶಗಳ ವೈಜ್ಞಾನಿಕ ಅಧ್ಯಯನಕ್ಕೆ ಸಹಾಯವಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ಮಹಿಸಿದ್ದ ಪ್ರಾಚಾರ್ಯ ಪ್ರೊ. ಉಮೇಶರವರು ಕಲಾ ವಿಭಾಗದಲ್ಲಿ ಭೂಗೋಳಶಾಸ್ತ್ರವು ಇಂದು ಸಾಕಷ್ಟು ವೈಜ್ಞಾನಿಕತೆಯ ರೂಪ ಪಡೆದು ವಿಜ್ಞಾನವಾಗಿ ಬದಲಾಗಿರುವ ಪರಿಯ ಕುರಿತು ವಿವರಿಸಿದರು.

ವಿಭಾಗದ ಮುಖ್ಯಸ್ಥೆ ಶ್ರೀಮತಿ ಎ ಎಸ್ ಸ್ಮಿತಾ ವೇದಿಕೆಯಲ್ಲಿ ಉಪಸ್ಥಿತಿರಿದ್ದರು. ಪ್ರಾಧ್ಯಾಪಕರಾದ ಶ್ರೀ ಬಿ. ಮಂಜುನಾಥರವರು ಸ್ವಾಗತಿಸಿ, ವಂದಿಸಿದರು.

ಶ್ರೀ ಮಧು ಬಲ್ಲಪ್ಪಸ್ವಾಮಿ ಕೆ.ಸಿ. ವಿಶ್ಲೇಷಕರು, ಜಿಯೋ ಪ್ಲಾನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ರವರು ವಿಶೇಷ ಉಪನ್ಯಾಸ ನೀಡುತ್ತಿರುವುದು.

ಚಿತ್ರದಲ್ಲಿ ಪ್ರಾಚಾರ್ಯ ಪ್ರೊ. ಉಮೇಶ ಹಾಗೂ ಶ್ರೀಮತಿ ಎ ಎಸ್ ಸ್ಮಿತಾ ರವರನ್ನು ಕಾಣಬಹುದು.




ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯರುಗಳು

